ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 1622/25**

ಪಿಡಬ್ಲ್ಯುಃ – 4

ಸಿಡಬ್ಲ್ಯುಃ – **7**

ದಿನಾಂಕಃ 18.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಚೇತನ್ ಬೊಮನಾಳೆ |
| ತಂದೆಯ ಹೆಸರು | – ನಾಗೇಂದ್ರ ಬೊಮನಾಳೆ |
| ವಯಸ್ಸು | – 35 ವರ್ಷ |
| ವೃತ್ತಿ | – ಅಬಕಾರಿ ನಿರೀಕ್ಷಕರು, ಮಡಿಕೇರಿ ಉಪ ವಿಭಾಗ |
| ವಾಸಸ್ಥಳ | – ಮಡಿಕೇರಿ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ನಾನು ಡಿಸೆಂಬರ್– 2023 ರಿಂದ ಇಲ್ಲಿಯವರೆಗೆ ಮಡಿಕೇರಿ ಉಪ ವಿಭಾಗದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 24–04–2025 ರಂದು ಈ ಪ್ರಕರಣದ ಕಡತವನ್ನು ಚಾಸಾ–1 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ದಿಃ 25.04.2025 ರಂದು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಪುಳಗಂಜಿಯನ್ನು ರಾಸಾಯನಿಕ ಪರೀಕ್ಷೆಗೆಂದು ಎಫ್ ಎಸ್ ಎಲ್ ಗೆ ಚಾಸಾ–5 ರವರೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 04.05.2025 ರಂದು ಭಾಗಮಂಡಲ ಗ್ರಾಮ ಪಂಚಾಯತಿ ಪಿ ಡಿ ಒ ರವರಿಗೆ ಕೃತ್ಯ ಸ್ಥಳದ ಮನೆಯ ಮಾಲೀಕತ್ವ ಹಾಗೂ ವಾಸದ ದೃಢೀಕರಣ ನೀಡುವಂತೆ ಕೋರಿ ಮನವಿ ಪತ್ರ ಸಲ್ಲಿಸಿಕೊಂಡಿರುತ್ತೇನೆ. ದಿಃ 09.05.2025 ರಂದು ಎಫ್ ಎಸ್ ಎಲ್ ನಿಂದ ರಾಸಾಯನಿಕ ವರದಿಯನ್ನು

ಪಡೆದುಕೊಡಿರುತ್ತೇನೆ. ಸದರಿ ವರದಿಯಲ್ಲಿ ಈಥೇಲ್ ಆಲ್ಕೋಹಾಲ್ 2.3% ಇರುವುದು ಕಂಡು ಬಂದಿರುತ್ತದೆ. ದಿಃ 14.05.2025 ರಂದು ಭಾಗಮಂಡಲ ಗ್ರಾಮ ಪಂಚಾಯತಿ ಪಿ ಡಿ ಒ ರವರಿಂದ ವರದಿ ಪಡೆದುಕೊಂಡಿರುತ್ತೇನೆ. ಸದರಿ ವರದಿಯಲ್ಲಿ ಕೃತ್ಯ ಸ್ಥಳದ ಮನೆ ಆರೋಪಿ ತಂದೆ ಎಲುಂಬ ಅವರ ಹೆಸರಿನಲ್ಲಿ ಇದೆ, ಸದರಿ ಮನೆಯಲ್ಲಿ ಆರೋಪಿ ವಾಸವಾಗಿದ್ದಾರೆ ಎಂದು ವರದಿ ನೀಡಿರುತ್ತಾರೆ. ದಿಃ 26.05.2025 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಆರೋಪಿ ತಂದೆಯ ಬಗ್ಗೆ ವಿಚಾರಿಸಿದಾಗ ಸದರಿಯವರು ಮೃತ ಪಟ್ಟಿರುವುದಾಗಿ ತಿಳಿದು ಬಂದಿರುತ್ತದೆ ಹಾಗೂ ಅದೇ ದಿನ ಸ್ಥಳದಲ್ಲಿ ಮಹಜರು ಮಾಡಿರುತ್ತೇನೆ. ಚಾಸಾ-2 ರಿಂದ 4 ರವರಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿಯ ವಿರುದ್ಧ ತನಿಖೆ ಪೂರ್ಣ ಗೊಳಿಸಿ ಮೇಲ್ನೋಟಕ್ಕೆ ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯಕ್ಕೆ ಧೋಷಾರೋಪಣಾ ಪಟ್ಟಿ ಸಲ್ಲಿಸಿಕೊಂಡಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಆರೋಪಿ ಈ ದಿನ ನ್ಯಾಯಾಲಯದ ಕಲಾಪಕ್ಕೆ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಮಾಫಿ ಅರ್ಜಿಯನ್ನು ಸಲ್ಲಿಸಿದ್ದು , ಆರೋಪಿಯನ್ನು ಗುರುತಿಸಲು ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ಎಫ್ ಎಸ್ ಎಲ್ ಗೆ ಕಳುಹಿಸಿದ್ದ ಪುಳಗಂಜಿಯನ್ನು ನೋಡಿ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು. ಮಾ.1 ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ 25.04.205 ರಂದು ಎಫ್ ಎಸ್ ಎಲ್ ಗೆ ಕಳುಹಿಸಿದ ಕೋರಿಕೆ ಪತ್ರ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಎಫ್ ಎಸ್ ಎಲ್ ವರದಿಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಪಿ ಡಿ ಒ ಅವರಿಗೆ ಬರೆದ ಮನವಿ ಪತ್ರ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು

ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಪಿ ಡಿ ಒ ರವರು ನೀಡಿದ ದೃಢೀಕರಣ ಪತ್ರ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ - ಆರೋಪಿ ಪರ ವಕೀಲರಾದ ಶ್ರೀ. ಸಿ ಎ ಪಿ ರವರಿಂದಃ-

ನೀವು ನಿಪಿ-4 ದಾಖಲೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಹೌದು ನೋಡಿದ್ದೇನೆ ಹಾಗಾದರೆ ಬೆಲ್ಲದ ಕೊಳೆ ಎಂದು ಏಕೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ದಾಳಿಗೆ ಹೋಗುವ ಪೂರ್ವದದಲ್ಲಿ ತಯಾರು ಮಾಡಲಾಗಿರುತ್ತದೆ, ದಾಳಿಗೆ ಹೋಗುವವರೆಗೂ ಅಲ್ಲಿ ಯಾವ ಮದ್ಯ ಇರುತ್ತದೆ ಎಂದು ತಿಳಿದಿರುವುದಿಲ್ಲ ಹಾಗಾಗಿ ನಿಪಿ-4 ರಲ್ಲಿ ನಮೂದು ಮಾಡಿಲ್ಲ. ಆನಂತರ ದಾಳಿ ಆದ ಮೇಲೆ ನಿಪಿ-4 ರಲ್ಲಿ ಯಾವುದೇ ಬದಲಾವಣೆ ಮಾಡಲು ಆಗುವುದಿಲ್ಲ, ಎಫ್ ಎಸ್ ಎಲ್ ವರದಿಗೆ ಕಳುಹಿಸುವಾಗ ದೊರೆತ ಮದ್ಯದ ಹೆಸರನ್ನು ನಮೂದಿಸಿ ಕಳುಹಿಸುತ್ತೇವೆ ಎನ್ನುತ್ತಾರೆ. ಆರೋಪಿ ಮನೆಯಲ್ಲಿ ಬೆಲ್ಲದ ಪುಳಗಂಜಿ ದೊರೆತಿಲ್ಲ ಎಂದರೆ ಸರಿಯಲ್ಲ. ನಿಪಿ-8 ದೃಢೀಕರಣ ಪತ್ರದಲ್ಲಿ ಎಲುಂಬರವರ ಮನೆಯ ನಂಬರ್ ಆಗಲಿ, ಅದು ಯಾವ ಸರ್ವೆ ನಂಬರ್ ನಲ್ಲಿ ಇದೆ ಎಂದಾಗಲಿ, ಎಂತಹ ಮನೆ ಎಂದು ನಮೂದು ವಾಡಿಲ್ಲ ಎಂದರೆ ಸರಿ. ಮುಖ್ಯ ರಾಸಾಯನಿಕ ತಜ್ಞರು ನೀಡಿರುವ ನಿಪಿ-6 ಎಫ್ ಎಸ್ ಎಲ್ ವರದಿ ತಪ್ಪು ಎಂದರೆ ಸರಿಯಲ್ಲ. ನಿಪಿ-6 ವರದಿಯಲ್ಲಿ ಬೆಲ್ಲದ ಪುಳಗಂಜಿಯಲ್ಲಿ ನೀರಿನ ಅಂಶ, ಸಕ್ಕರೆ ಅಂಶ, ಎಥನಾಲ್ ಅಂಶ ಎಷ್ಟು ಎಂದು ನಮೂದು ಮಾಡಿಲ್ಲದೆ ಇರುವುದರಿಂದ ನಿಪಿ-6 ತಪ್ಪು ವರದಿ ಎಂದರೆ ಸರಿಯಲ್ಲ. ನಿಪಿ-6 ರ ಕುರಿತು ನೀವು ಸೆಕೆಂಡ್ ಒಪಿನಿಯನ್ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎನ್ನುತ್ತಾರೆ. ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ನಾನು ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ಮು. ಮಾ. 1 ರ ಮೇಲೆ ನೀವು ಎಫ್ ಎಸ ಎಲ್ ಗೆ ಕಳುಹಿಸಿದ ಬಗ್ಗೆ ಕಲೆಕ್ಷನ್ ಡೇಟ್, ಪ್ರಿಸರ್ವೇಶನ್ ಡೇಟ್, ಅನಾಲಿಸಿಸ್ ಡೇಟ್ ನಮೂದು ಮಾಡಿಲ್ಲ ಎಂದರೆ ಸರಿ. ಮು. ಮಾ. 1ನ್ನು ನಾನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಇಲಾಖಾ

ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.